424 (495) ಶ್ರೀ ರೋಷನ್‌ಬೇಗ್ (ಜಯಮಹಲ್) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗವಿಕಲರ ಹಣಕಾಸು ನಿಗಮ ಸ್ಥಾಪಿಸುವ ಬಗ್ಗೆ ಯಾವುದಾದರೂ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ,

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಹೌದು

ಆ) ಪರಿಶೀಲನೆಯಲ್ಲಿದೆ

425 (821) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಇದುವರೆಗೂ ಮಂಜೂರಾಗಿರುವ ವಿದ್ಯುತ್ ಸಬ್ ಸ್ಟೇಷನ್ 33/11 ಕೆ ವಿ ವಿತರಣಾ ಕೇಂದ್ರಗಳು ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು),

ಆ) ಈ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಸ್ಥಳಗಳಾವುವು, ಮುಂದೆ ಮಂಜೂರಾತಿಗೆ ಗುರುತಿಸಿರುವ ಸ್ಥಳಗಳಾವುವು,

ಇ) ಮಾಡಾವು ವಿದ್ಯುತ್ ಕೇಂದ್ರ ಕಾಮಗಾರಿ ಪ್ರಗತಿ ಯಾವ ಹಂತದಲ್ಲಿದೆ ಪ್ರಾರಂಭಿಸದಿದ್ದಲ್ಲಿ ಇದುವರೆಗೂ ಪ್ರಾರಂಭಿಸದಿರಲು ಕಾರಣವೇನು,

ಈ) ಮಂಜೂರಾದ ಎಲ್ಲಾ ಕೇಂದ್ರಗಳಿಗೆ ಜಾಗ(ಸ್ಥಳವನ್ನು) ಗುರುತಿಸಿದೆಯೇ ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲಗೆ ಇದುವರೆವಿಗೆ 8 (ಎಂಟು) 33/11 ಕೆ ವಿ/ ವಿದ್ಯುತ್ ವಿತರಣಾ ಕೇಂದ್ರಗಳು ಮಂಜೂರಾಗಿದ್ದು, ಇವುಗಳ ವಿಧಾನಸಭಾ ಕ್ಷೇತ್ರವಾರು ವಿವರ ಕೆಳಕಂಡಂತಿದೆ

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರ	33/11 ಕೆ ವಿ ವಿದ್ಯುತ್ ವಿರತಣಾ ಕೇಂದ್ರಗಳ ಹೆಸರು
1	ಮಂಗಳೂರು	1 ಕದ್ರಿ 2 ನಂಗ

		3 ಅತ್ತಾವರ
		4 ಅಳಿಕೆ (ಕುದ್ರೋಳಿ)
		5 ಟ್ಯಾಂಗ್ಲಿನ್
2	ಬಂಟ್ವಾಳ	6 ವಗ್ಗ
		7 ಕುಕ್ಕಿಪಾಡಿ
3	ಪುತ್ತೂರು	8 ನೆಲ್ಯಾಡಿ

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಾಲಿನಲ್ಲಿ ಮಂಜೂರಾದ ಸ್ಥಳಗಳ ವಿಧಾನಸಭಾ ಕ್ಷೇತ್ರವಾರು ವಿವರ ಈ ಕೆಳಗಿನಂತಿದೆ

ಸಂಖ್ಯೆ	ವಿಧಾನಸಭಾ ಕ್ಷೇತ್ರ	ಸ್ಥಳ
1	ಮಂಗಳೂರು	1 ಕದ್ರಿ 2 ನಂದಿಗುಡ್ಡ

ಮುಂದೆ ಮಂಜೂರಾತಿಗಾಗಿ ಗುರುತಿಸಿರುವ ಸ್ಥಳಗಳ ವಿಧಾನಸಭಾ ಕ್ಷೇತ್ರವಾರು ವಿವರಗಳು ಈ ಕೆಳಗಿನಂತಿದೆ

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರ	33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರಗಳ ಹೆಸರು
1	ಸುಳ್ಯ	ಗುತ್ತಿಗಾರು ಸುಬ್ರಹ್ಮಣ್ಯ ಸಂಪಾಜೆ

ಇ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಮಾಡಾವುವಿನಲ್ಲಿ ಒಂದು 110 ಕೆ ವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಗೆ ಕವಿಪ್ರನಿನಿಯ ತಾಂತ್ರಿಕ ಸಲಹಾ ಸಮಿತಿಯು ದಿನಾಂಕ 8-12-2005 ರಲ್ಲಿ ಅನುಮೋದನೆಯನ್ನು ನೀಡಿರುತ್ತದೆ ಈ ಕೇಂದ್ರದ ಸ್ಥಾಪನೆಗೆ ಅವಶ್ಯಕವಾದ ಸರ್ಕಾರಿ ಜಮೀನನ್ನು ಗುರುತಿಸಲಾಗಿದ್ದು, ಜಮೀನು ಮಂಜೂರಾತಿಗಾಗಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಲಾಗಿದೆ ಈ ಮಧ್ಯೆ ಜಾಗದ "ಜಿಯೋ ಟೆಕ್ನಿಕಲ್ ಇನ್‌ವೆಸ್ಟಿಗೇಷನ್" ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ ಈ ಉಪಕೇಂದ್ರ ಸ್ಥಾಪನೆಗೆ ಕನಿಷ್ಟ ಪಕ್ಷ ಮಾಡಾವು

ವರೆವಿಗಾದರೂ 110 ಕೆ ವಿ ಪುತ್ತೂರು–ಸುಳ್ಯ ಮಾರ್ಗ ನಿರ್ಮಾಣವಾಗಬೇಕಾಗಿದ್ದು, ತದ ನಂತರ ಈ ಮಾರ್ಗವನ್ನು ಟ್ಯಾಪ್ ಮಾಡಿ ಉದ್ದೇಶಿತ ವಿದ್ಯುತ್ ಉಪಕೇಂದ್ರವನ್ನು ಸ್ಥಾಪನೆ ಮಾಡಬೇಕಾಗಿರುತ್ತದೆ ಈ ಮಾರ್ಗವು ಅರಣ್ಯ ಪ್ರದೇಶದಲ್ಲಿ ಹಾದು ಹೋಗುವುದರಿಂದ, ಅರಣ್ಯ ಇಲಾಖೆಯಿಂದ ಒಟ್ಟಾರೆ ಸುಮಾರು 22 ಹೆಕ್ಟೇರ್ ಗಳಷ್ಟು ಅರಣ್ಯ ಪ್ರದೇಶವನ್ನು ತೆರವುಗೊಳಿಸಲು ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ಇದಕ್ಕೆ ಇನ್ನೂ ಅರಣ್ಯ ಇಲಾಖೆಯಿಂದ ಅನುಮತಿ ದೊರೆಯಬೇಕಾಗಿರುತ್ತದೆ

ಈ) ಮಂಗಳೂರು ವಿದಾನಸಬಾ ಕ್ಷೇತ್ರ ವ್ಯಾಪ್ತಿಯ ಅಳಿಕೆ (ಕುದ್ರೋಳಿ) ಯಲ್ಲಿನ ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಅಗತ್ಯವಿರುವ ಸ್ಥಳಕ್ಕಾಗಿ ನಿರಂತರ ಪತ್ರ ವ್ಯವಹಾರ ಹಾಗೂ ಪ್ರಯತ್ನದ ಹೊರತಾಗಿಯೂ, ಮಂಗಳೂರು ಮಹಾನಗರ ಪಾಲಿಕೆಯಿಂದ ಸ್ಥಳವು ಮೆಸ್ಕಾಂಗೆ ಹಸ್ತಾಂತರವಾಗಿರುವುದಿಲ್ಲ, ಅತ್ತಾವರದಲ್ಲಿನ ವಿದ್ಯುತ್ ಉಪಕೇಂದ್ರದ ಸ್ಥಾವನೆಗೆ, ಅಗತ್ಯವಿರುವ ಸ್ಥಳವು ಮೆಸ್ಕಾಂ ನಲ್ಲಿ ಲಭ್ಯವಿರುತ್ತದೆ ಹಾಗೆಯೇ, ಕದ್ರಿ ಹಾಗೂ ನಂದಿಗುಡ್ಡಗಳಲ್ಲಿ ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಅಗತ್ಯವಿರುವ ಸ್ಥಳಗಳು ಸರಕಾರದಿಂದ ಮೆಸ್ಕಾಂಗೆ ಹಸ್ತಾಂತರಿಸಲಾಗಿದೆ

ಬಂಟ್ವಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಗ್ಗ ಮತ್ತು ಕುಕ್ಕಿಪಾಡಿಗಳಲ್ಲಿನ ವಿದ್ಯುತ್ ವಿತರಣಾ ಕೇಂದ್ರಗಳಿಗೆ ಸ್ಥಳ ಲಭ್ಯವಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ

ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನೆಲ್ಯಾಡಿಯಲ್ಲಿನ ವಿದ್ಯುತ್ ವಿತರಣಾ ಕೇಂದ್ರಕ್ಕೆ ಸ್ಥಳ ಲಭ್ಯವಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ

426 (822) ಶ್ರೀಮತಿ ಶಕುಂತಲಾ ಟಿ ಶೆಟ್ಟಿ(ಪುತ್ತೂರು) ನಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾರಿಗೆ ಸಂಸ್ಥೆಯ ವಿವಿಧ ನಿಗಮಗಳಲ್ಲಿ ಈ ವರ್ಷ ನೇಮಕಗೊಂಡ ಚಾಲಕ ನಿರ್ವಾಹಕರ ಹುದ್ದೆಗಳೆಷ್ಟು ವಿಭಾಗವಾರು ನೇಮಕ ವಿವರ ನೀಡಿರಿ,

ಆ) ಸದರಿ ನೇಮಕಾತಿಗಳಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವ ವಿಚಾರದಲ್ಲಿ ಸರ್ಕಾರದ ನಿಲುವೇನು,